Code No. : **DTA-05**

## ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 3

## ಡಿಪ್ಲೋಮಾ ಇನ್ ಥಿಯೇಟರ್ ಆರ್ಟ್ಸ್ ಪರೀಕ್ಷೆ, ನವೆಂಬರ್ – 2020

# ರಂಗ ಸಿದ್ಧತೆ

## ಪತ್ರಿಕೆ – V

ದಿನಾಂಕ : 06. 11. 2020 ]

ಸಮಯ : ಬೆಳಗ್ಗೆ 9.00 ರಿಂದ ಮಧ್ಯಾಹ್ನ 12.00 ರವರೆಗೆ ] [ ಗರಿಷ್ಠ ಅಂಕಗಳು : 50

### ವಿಭಾಗ – ಎ

1. ನೀವು ಪ್ರಯೋಗಿಸಿದ ನಾಟಕವೊಂದರ ಉದಾಹರಣೆಯೊಂದಿಗೆ ರಂಗಸಜ್ಜಿಕೆಯ ಮಹತ್ವ, ಅದರ ವಿನ್ಯಾಸದ ಯೋಜನೆ ಹಾಗೂ ನಾಟಕಕ್ಕೆ ಅದು ನೀಡುವ ಅರ್ಥ ವಿಸ್ತಾರದ ಬಗ್ಗೆ ಬರೆಯಿರಿ. 10

*ಅಥವಾ*

ಯಕ್ಷಗಾನದ ಆಹಾರ್ಯ ವಿನ್ಯಾಸಗಳ ಬಗೆಗಳನ್ನು ಸ್ಥೂಲವಾಗಿ ಪರಿಚಯಿಸಿ.

2. ನಾಟಕ ಪ್ರಯೋಗದಲ್ಲಿ ರಂಗ ಸಂಗೀತದ ಪಾತ್ರವೇನು ? ನಾಟಕದ ಆಶಯವನ್ನು ಬಿಂಬಿಸುವಲ್ಲಿ ಅದು ಹೇಗೆ ಸಹಕಾರಿ ? ನಿರ್ದಿಷ್ಟ ರಂಗ ಪ್ರಯೋಗವೊಂದರ ಹಿನ್ನೆಲೆಯಲ್ಲಿ ವಿವರಿಸಿ. 10

*ಅಥವಾ*

ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ ಮುಂತಾದ ಇತರ ಸಂಗೀತ ಪ್ರಕಾರಗಳಿಗಿಂತ ರಂಗಸಂಗೀತವು ಹೇಗೆ ವಿಭಿನ್ನವಾಗಿದೆ ? ರಂಗಸಂಗೀತದ ಮುಖ್ಯ ಲಕ್ಷಣ ಹಾಗೂ ಪ್ರಯೋಜನೆಗಳೇನು ? ನೀವು ನೋಡಿದ ನಾಟಕವೊಂದರ ಹಿನ್ನೆಲೆಯಲ್ಲಿ ಚರ್ಚಿಸಿ.

### ವಿಭಾಗ – ಬಿ

3. ಈ ಕೆಳಗಿನ ವಿಷಯಗಳ ಕುರಿತು ಪರಿಚಯಾತ್ಮಕ ಟಿಪ್ಪಣಿ ಬರೆಯಿರಿ : 10

ಅ) ವಸ್ತ್ರವಿನ್ಯಾಸ

ಬ) ಧ್ವನಿ ಪರಿಣಾಮಗಳು

ಕ) ಕ್ಯೂಷೀಟ್

ಡ) ಮೊಗವಾಡಗಳು

*ಅಥವಾ*

ಅ) ಶೈಲೀಕೃತ ಮುಖವರ್ಣಿಕೆ

ಬ) ರಂಗಸಂಗೀತ

ಕ) ಡಿಮ್ಮರ್

ಡ) ರಂಗಸಜ್ಜಿಕೆ ಮಾದರಿ

4. ಈ ಕೆಳಗಿನ ಯಾವುದಾದರೊಂದು ಜೊತೆ ಪಾತ್ರಗಳಿಗೆ ವೇಷಭೂಷಣ ವಿನ್ಯಾಸ ಮಾಡಿ ಕಾರಣ ಸಹಿತ ವಿವರಿಸಿ : 10

ಅ) ಮಲ್ಲಿಕಾ ಮತ್ತು ಕಾಳಿದಾಸ (ಆಷಾಢದ ಒಂದು ದಿನ)

ಬ) ಆನ್ಯ ಮತ್ತು ಟ್ರೋಫಿಮೋವ್ (ಚೆರ್ರಿ ತೋಪು)

## ವಿಭಾಗ – ಸಿ

5. ರಂಗಶಿಕ್ಷಣ ಪಡೆದ ನಂತರ ಒಂದು ನಾಟಕ ಶಿಬಿರವನ್ನು ನಡೆಸಲು ಆಹ್ವಾನ ಬಂದರೆ 10

ಅ) ಆ ತಂಡದ ಜೊತೆ ಹೇಗೆ ಅನುಸಂಧಾನ ಮಾಡುತ್ತೀರಿ ?

ಬ) ಶಿಬಿರದ ಕಾರ್ಯಕ್ರಮಗಳನ್ನು ಹೇಗೆ ಯೋಜಿಸುತ್ತೀರಿ ?

ಕ) ಯಾವ ನಾಟಕವನ್ನು ಆಯ್ದುಕೊಳ್ಳುತ್ತೀರಿ ? ಏಕೆ ?

ಡ) ರಂಗಸಜ್ಜಿಕೆ, ವೇಷಭೂಷಣ, ಬೆಳಕು ಮುಂತಾದ ರಂಗತಂತ್ರಗಳನ್ನು ಹೇಗೆ ವಿನ್ಯಾಸಗೊಳಿಸುತ್ತೀರಿ ? ಕಾರಣ ಸಹಿತ ವಿವರಿಸಿ.